ಕರ್ನಾಟಕ ಸರ್ಕಾರ

**ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.**

**HASSAN INSTITUTE OF MEDICAL SCIENCES, HASSAN**

**(An Autonomous Medical Institution, Government of Karnataka )**

**SRI CHAMARAJENDRA HOSPITAL CAMPUS, HASSAN-573201**

**Website: www.hims-hassan.org, Phone/Fax No.08172-231699/ 231599**

**Email: directorhims@yahoo.com**


# 21ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳು

## ದಿನಾಂಕ:17-12-2014, ಬುಧವಾರ,

## : ಸ್ಥಳ :

## ಸ್ಥಳ: ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರ ಕಛೇರಿ ನಂ.2 ಸುವರ್ಣ ವಿಧಾನ ಸೌಧ, ನೆಲಮಹಡಿ, ಬೆಳಗಾವಿ.

ಕರ್ನಾಟಕ ಸರ್ಕಾರ

# ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

**HASSAN INSTITUTE OF MEDICAL SCIENCES, HASSAN**

**(An Autonomous Institute under the Dept of Medical Education, Government of Karnataka)**

**SRI CHAMARAJENDRA HOSPITAL CAMPUS, HASSAN-573201**

Website: www.hims-hassan.org Phone/Fax No.08172-231699, Email:directorhims@yahoo.com

## 21ನೇ ಆಡಳಿತ ಮಂಡಳಿಯ ಸಭಾ ನಡವಳಿಗಳು

ದಿನಾಂಕ:17-12-2014 ಬುಧವಾರ ಸಂಜೆ:4-00 ಗಂಟೆಗೆ ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರ ಕಛೇರಿ ಕೊಠಡಿ ಸಂಖ್ಯೆ:02, ಸುವರ್ಣವಿಧಾನ ಸೌಧ, ನೆಲಮಹಡಿ, ಬೆಳಗಾವಿ, ಇಲ್ಲಿ ಸನ್ಮಾನ್ಯ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್, ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಅಧ್ಯಕ್ಷರು, ಆಡಳಿತ ಮಂಡಳಿ, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇವರ ಘನ ಅಧ್ಯಕ್ಷತೆಯಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 21ನೇ ಆಡಳಿತ ಮಂಡಳಿ ಸಭೆ ಸೇರಿ ನಡೆಸಿದ ಸಭಾ ನಡವಳಿಗಳು.

**ಒಟ್ಟು ಸದಸ್ಯರ ಸಂಖ್ಯೆ:08** **ಹಾಜರಿದ್ದ ಸದಸ್ಯರ ಸಂಖ್ಯೆ:05**

| | | | |
|---|---|---|---|
| 01 | ಮಾನ್ಯ ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು ಕರ್ನಾಟಕ ಸರ್ಕಾರ , ಬೆಂಗಳೂರು. | ಅಧ್ಯಕ್ಷರು | ಹಾಜರಿರುತ್ತಾರೆ |
| 02 | ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ಕರ್ನಾಟಕ ಸರ್ಕಾರ, ವಿಕಾಸ ಸೌಧ, ಬೆಂಗಳೂರು. | ಉಪಾಧ್ಯಕ್ಷರು | ಹಾಜರಿರುತ್ತಾರೆ |
| 03 | ಮಾನ್ಯ ಕುಲಪತಿಗಳು, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವ ವಿದ್ಯಾಲಯ, ಕರ್ನಾಟಕ ಸರ್ಕಾರ, ಬೆಂಗಳೂರು. | ಸದಸ್ಯರು | -- |
| 04 | ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ಕರ್ನಾಟಕ ಸರ್ಕಾರ, ವಿಧಾನ ಸೌಧ, ಬೆಂಗಳೂರು. | ಸದಸ್ಯರು | -- |
| 05 | ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ಸರ್ಕಾರ, ವಿಕಾಸ ಸೌಧ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 06 | ಮಾನ್ಯ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಕರ್ನಾಟಕ ಸರ್ಕಾರ, ಆನಂದರಾವ್ ವೃತ್ತ, ಬೆಂಗಳೂರು. | ಸದಸ್ಯರು | ಹಾಜರಿರುತ್ತಾರೆ |
| 07 | ಮಾನ್ಯ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ. | ಸದಸ್ಯರು | – |
| 08 | ಮಾನ್ಯ ನಿರ್ದೇಶಕರು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ. | ಸದಸ್ಯ ಕಾರ್ಯದರ್ಶಿ | ಹಾಜರಿರುತ್ತಾರೆ |

17/12/14

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

ನಿರ್ದೇಶಕರ ಕಛೇರಿ ಹಿಮ್ಸ್, ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | 08.09.2014 ರಂದು ನಡೆದ 20ನೇ ಆಡಳಿತ ಮಂಡಳಿ ಸಭೆಯ ಸಭಾ ನಡವಳಿಗಳ ಅನುಪಾಲನಾ ವರದಿಯನ್ನು ಓದಿ ಅಂಗೀಕರಿಸುವುದು. | ದಿನಾಂಕ:08.09.2014 ರಂದು ನಡೆದ 20ನೇ ಆಡಳಿತ ಮಂಡಳಿ ಸಭೆಯ ತೀರ್ಮಾನದ ಮೇಲೆ ತೆಗೆದುಕೊಂಡ ಕ್ರಮದ ಅನುಪಾಲನಾ ವರದಿಯನ್ನು ಓದಿ ಅನುಮೋದಿಸಲಾಯಿತು. |
| 01 | ಹಿಮ್ಸ್ ಸಂಸ್ಥೆಯ ಬೋಧಕ ಸಿಬ್ಬಂದಿ-ಯವರ ಪರಿವೀಕ್ಷಣಾ ಅವಧಿಯನ್ನು (Probationary) ಘೋಷಿಸುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಬೋಧಕ ಹುದ್ದೆಗೆ ನೇರ ನೇಮಕಾತಿಯಲ್ಲಿ ಆಯ್ಕೆಗೊಂಡು ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದ ಡಾ.ಭರತ್ ಕುಮಾರ್.ಜಿ.ಎನ್.ರವರು 02 ವರ್ಷ ಖಾಯಂ ಪೂರ್ವ ಸೇವಾವಧಿ ತೃಪ್ತಿಕರವಾಗಿ ಪೂರೈಸಿರುತ್ತಾರೆ. ಸಂಸ್ಥೆಯಲ್ಲಿ ಮತ್ತು ಸರ್ಕಾರದ ಹಂತದಲ್ಲಿ ಇವರ ಮೇಲೆ ಯಾವುದೇ ಇಲಾಖಾ ವಿಚಾರಣೆ ಬಾಕಿ ಇರುವುದಿಲ್ಲ ಮತ್ತು ಸದರಿಯವರ ಖಾಯಂ ಪೂರ್ವ ಸೇವಾವಧಿಯು ದಿನಾಂಕ:01-02-2012 ರಿಂದ 31-01-2014 ಆಗಿದ್ದು ಇಲಾಖಾ ಪರೀಕ್ಷೆ ಉತ್ತೀರ್ಣರಾದ ದಿನಾಂಕ: 21-07-2014ರವರೆಗೆ ಮುಂದೂಡಿ ಸದರಿ ವೈದ್ಯರ ಖಾಯಂ ಪೂರ್ವ ಸೇವಾವಧಿಯನ್ನು ಘೋಷಿಸಬಹುದೆಂದುಸರ್ವಾನುಮತದಿಂದ ಒಪ್ಪಿ ಅನುಮೋದಿಸಲಾಯಿತು. |

| ಕ್ರಮ ಸಂಖ್ಯೆ | ಬೋಧಕರ ಹೆಸರು ಮತ್ತು ವಿಭಾಗ | ಪದನಾಮ | ಸೇವೆಗೆ ಸೇರಿದ ದಿನಾಂಕ | ಖಾಯಂ ಪೂರ್ವ ಸೇವಾ ಅವಧಿ ಪೂರ್ಣಗೊಳಿಸಿದ ದಿನಾಂಕ |
|---|---|---|---|---|
| 01 | ಡಾ. ಭರತ್ ಕುಮಾರ್.ಜಿ.ಎನ್. ಮಕ್ಕಳ ಚಿಕಿತ್ಸಾ ವಿಭಾಗ | ಸಹಾಯಕ ಪ್ರಾಧ್ಯಾಪಕರು | 01.02.2012 | 21.07.2014 |

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 02 | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ ಇಲ್ಲಿಗೆ ಸರ್ಕಾರದಿಂದ ಹಿಂದೆಯೇ ಮಂಜೂರು ಮಾಡಿರುವ 07 ಸಹ ಪ್ರಾಧ್ಯಾಪಕರ ಹುದ್ದೆಗಳನ್ನು ಮುಂದುವರೆಸುವ ಬಗ್ಗೆ. | ಸರ್ಕಾರದ ಆದೇಶ ಸಂಖ್ಯೆ:ಆಕುಕ 266 ಎಂಪಿಎಸ್ 2006ರ ದಿನಾಂಕ:12.09.2006ರಲ್ಲಿ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ 100 ವಿದ್ಯಾರ್ಥಿಗಳ ಪ್ರವೇಶಾತಿಗಾಗಿ 31 ಸಹ ಪ್ರಾಧ್ಯಾಪಕರ ಹುದ್ದೆಗಳು ಮಂಜೂರಾಗಿರುತ್ತದೆ. (06 ಹೊಸ ವೈದ್ಯಕೀಯ ಕಾಲೇಜುಗಳಿಗೆ ಅನ್ವಯಿಸುವಂತೆ)<br>ಎಂ.ಸಿ.ಐ ನಿಗದಿಪಡಿಸಿರುವ ಹುದ್ದೆಗಳಿಗಿಂತ ಹೆಚ್ಚುವರಿಯಾಗಿ ಸರ್ಕಾರವು ಮಂಜೂರು ಮಾಡಿರುವ 07 ಸಹ ಪ್ರಾಧ್ಯಾಪಕರ ಹುದ್ದೆಯನ್ನು ಸರ್ಕಾರಿ ಆದೇಶ ಸಂಖ್ಯೆ:ಆಕುಕ 321 ಕೆವಿಎಂ 2013, ದಿನಾಂಕ:21.03.2014 ರಂದು ರದ್ದು ಮಾಡಿ ಆದೇಶ ಹೊರಡಿಸಿರುತ್ತದೆ. |



17/12/14
ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ಹಾಲಿ ಸಹಾಯಕ ಪ್ರಾಧ್ಯಾಪಕ ಹುದ್ದೆಗಳಿಗೆ ಪದೋನ್ನತಿ ಮೇಲೆ ಭರ್ತಿ ಮಾಡಲು ಮತ್ತು ಸ್ನಾತ್ತಕೋತ್ತರ ಪದವಿಗಳಿಗೆ ಹುದ್ದೆಗಳ ಅವಶ್ಯಕತೆ ಇರುವುದರಿಂದ ಸಾರ್ವಜನಿಕರ ಮತ್ತು ವಿದ್ಯಾರ್ಥಿಗಳ ಹಿತ ದೃಷ್ಟಿಯಿಂದ ಬೋಧಕರ ಕೊರತೆಯನ್ನು ನೀಗಿಸಲು ಸಹ ಪ್ರಾಧ್ಯಾಪಕರ ಹುದ್ದೆ ಅತ್ಯವಶ್ಯಕವಾಗಿರುತ್ತದೆ. ಆದುದರಿಂದ ಈಗಾಗಲೇ ಮಂಜೂರಾಗಿದ್ದ 31 ಸಹ ಪ್ರಾಧ್ಯಾಪಕರ ಹುದ್ದೆಗಳಲ್ಲಿ ಹಿಂಪಡೆದ 07 ಸಹ ಪ್ರಾಧ್ಯಾಪಕರ ಹುದ್ದೆಗಳನ್ನು ಪುನ: ಮುಂದುವರೆಸಿ ಮಂಜೂರಾತಿ ಆದೇಶವನ್ನು ನೀಡುವಂತೆ ನಿರ್ದೇಶಕರು ಸಭೆಯಲ್ಲಿ ಮಂಡಿಸಿದರು.<br>ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ಎಮ್.ಸಿ.ಐ. ನಿಯಮಾನುಸಾರ 100 ವಿದ್ಯಾರ್ಥಿಗಳ ಪ್ರವೇಶಾಕಾತಿಗೆ 24 ಸಹ ಪ್ರಾಧ್ಯಾಪಕರ ಹುದ್ದೆಗಳು ಅವಶ್ಯಕತೆ ಇರುವುದರಿಂದ ಈ ರೀತಿಯ ಕ್ರಮವನ್ನು ಸರ್ಕಾರವು ಕೈಗೊಂಡಿರುತ್ತದೆ. ಸ್ನಾತ್ತಕೋತ್ತರ ಪದವಿಗೆ ಮತ್ತು 150 ವಿದ್ಯಾರ್ಥಿಗಳ ಪ್ರವೇಶಾಕಾತಿಗೆ ಎಮ್.ಸಿ.ಐ. ನಿಯಮಾನುಸಾರ ಹೆಚ್ಚುವರಿಯಾಗಿ ಸಹ ಪ್ರಾಧ್ಯಾಪಕರ ಹುದ್ದೆ ಅವಶ್ಯಕವಿದ್ದಲ್ಲಿ ಹೊಸದಾಗಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ ಅನುಮೋದನೆ ಪಡೆಯುವುದೆಂದು ತೀರ್ಮಾನಿಸಲಾಯಿತು. |
| 03 | ಸಂಸ್ಥೆಯಲ್ಲಿ ಖಾಲಿ ಇರುವ ಬೋಧಕರು/ ಕಿರಿಯ ಸ್ಥಾನೀಯ ವೈದ್ಯರುಗಳನ್ನು ಕ್ರೂಢೀಕೃತ ವೇತನದಡಿ ನೇಮಕಾತಿ ಮಾಡಿಕೊಳ್ಳುವ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ಸರ್ಕಾರಿ ಆದೇಶ ಸಂಖ್ಯೆ: ಆಕುಕ 266 ಎಂಪಿಎಸ್ 2006, ದಿನಾಂಕ:07.09.2006 ಮತ್ತು 12.09.2006 ರಲ್ಲಿ MCI ನಿಯಮಾವಳಿ ಪ್ರಕಾರ ವಿವಿಧ ವಿಭಾಗಗಳಿಗೆ 92 ಬೋಧಕ/ ಕಿರಿಯ ಸ್ಥಾನೀಯ ಹುದ್ದೆ ಮಂಜೂರಾಗಿದ್ದು, ಹಾಲಿ 34 ಮಂದಿ ಕ್ರೂಢೀಕೃತ ವೇತನದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು, 58 ಹುದ್ದೆಗಳು ಖಾಲಿ ಇರುತ್ತವೆ. ಸಾರ್ವಜನಿಕ ರೋಗಿಗಳ ಹಿತದೃಷ್ಟಿ ಮತ್ತು ವಿದ್ಯಾರ್ಥಿಗಳ ಪಾಠ ಪ್ರವಚನಗಳಿಗೆ ಅನುಕೂಲವಾಗುವಂತೆ ಈ ಹುದ್ದೆಗಳನ್ನು ಭರ್ತಿ ಮಾಡುವುದು ಅವಶ್ಯಕವಾಗಿರುತ್ತದೆ. ಸಂಸ್ಥೆಯ ಬೈಲಾ ನಿಯಮ 12(4)ರ ಪ್ರಕಾರ ಬೋಧಕ/ಕಿರಿಯ ಸ್ಥಾನಿಯ ವೈದ್ಯರ ಹುದ್ದೆಗಳನ್ನು ನೇಮಕಾತಿ ಮಾಡಲು ಈ ಸಂಸ್ಥೆಯ ನಿರ್ದೇಶಕರು ಸಮಿತಿಯ ಅಧ್ಯಕ್ಷರಾಗಿರುವುದರಿಂದ ನೇಮಕಾತಿ ಮಾಡಿಕೊಳ್ಳಲು ಅನುಮತಿ ನೀಡಬೇಕೆಂದು ಸಂಸ್ಥೆಯ ನಿರ್ದೇಶಕರು ವಿಷಯವನ್ನು ಸಭೆಯ ಮುಂದೆ ಮಂಡಿಸಿದರು.<br>ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಖಾಲಿ ಇರುವ ಬೋಧಕ/ಕಿರಿಯ ಸ್ಥಾನಿಯ ಹುದ್ದೆಗಳನ್ನು ನೇರಸಂದರ್ಶನ ಕರೆದು ಗುತ್ತಿಗೆ ಆಧಾರದಲ್ಲಿ ಕ್ರೂಢೀಕೃತ ವೇತನದಲ್ಲಿ ನೇಮಕಾತಿ ಮಾಡಿಕೊಳ್ಳುವುದೆಂದು ತೀರ್ಮಾನಿಸಲಾಯಿತು. |



17/12/14
ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| 04 | ಶ್ರೀಮತಿ ಕವಿತಾ.ಸಿ.ಪಿ. ಕೋಂ ಲೇಟ್ ಡಾ.ತಿಪ್ಪೇರುದ್ರಯ್ಯ.ಸಿ. ಇವರಿಗೆ ಅನುಕಂಪದ ಆಧಾರದಮೇಲೆನೇಮಕಾತಿ ಮಾಡುವ ಬಗ್ಗೆ. | ವಿಷಯವನ್ನು ಮುಂದೂಡಲಾಯಿತು. |
| 05 | ಡಾ.ಕುಮಾರ್.ಎಸ್.ಆರ್., ಹಿರಿಯ ಸ್ಥಾನಿಯ ವೈದ್ಯರು, ಮಕ್ಕಳ ಚಿಕಿತ್ಸಾ ವಿಭಾಗ, ಹಿಮ್ಸ್, ಹಾಸನ ಇವರನ್ನು ಉನ್ನತ ವ್ಯಾಸಂಗಕ್ಕೆ ನಿಯೋಜಿಸಿರುವುದನ್ನು ಅನುಮೋದಿಸುವ ಬಗ್ಗೆ. | ಡಾ.ಕುಮಾರ್.ಎಸ್.ಆರ್., ಹಿರಿಯ ಸ್ಥಾನೀಯ ವೈದ್ಯರು, ಮಕ್ಕಳ ಚಿಕಿತ್ಸಾ ವಿಭಾಗ, ಹಿಮ್ಸ್, ಹಾಸನ ಇವರನ್ನು 2014-15ನೇ ಸಾಲಿಗೆ ಸೇವಾ ನಿರತ ಕೋಟಾದಡಿ 01 ವರ್ಷದ ಫೆಲೋಶಿಪ್ ಕೋರ್ಸ್‌ಗೆ ಮಣಿಪಾಲ್ ಆಸ್ಪತ್ರೆ, ಬೆಂಗಳೂರು ಇಲ್ಲಿಗೆ Fellowship in Neonatology ಆಯ್ಕೆಗೊಂಡಿರುತ್ತಾರೆ. ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆಕುಕ (ವೈ.ಶಿ), ಕರ್ನಾಟಕ ಸರ್ಕಾರ ಉಪಾಧ್ಯಕ್ಷರು, ಆಡಳಿತ ಮಂಡಳಿ, ಹಿಮ್ಸ್, ಹಾಸನ ರವರು ಒಪ್ಪಿ ಅನುಮೋದನೆಗಾಗಿ ಅಧ್ಯಕ್ಷರು, ಆಡಳಿತ ಮಂಡಳಿ ಇವರಿಗೆ ಕಡತ ಕಳುಹಿಸಿದ್ದು, ಅಧ್ಯಕ್ಷರು ಒಪ್ಪಿಗೆ ಸೂಚಿಸಿರುತ್ತಾರೆ. ಆದ್ದರಿಂದ ಕಛೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ:ಹಿಮ್ಸ್/ಸಿ(2)/32/2014-15, ದಿನಾಂಕ:09.10.2014ರ ಪ್ರಕಾರ ಸದರಿ ವೈದ್ಯರನ್ನು ಕರ್ನಾಟಕ ಸರ್ಕಾರದ ಮತ್ತು ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನದ ಆಡಳಿತ ಮಂಡಳಿಯ ಒಪ್ಪಿಗೆಯ ಷರತ್ತು ವಿಧಿಸಿ ಮತ್ತು ಸರ್ಕಾರದ ಆದೇಶ ಸಂಖ್ಯೆ:321 ಎಂಎಂಸಿ 2013, ಬೆಂಗಳೂರು ದಿನಾಂಕ:07.08.2013 ರಲ್ಲಿರುವ ಎಲ್ಲಾ ಷರತ್ತುಗಳನ್ನು ಕೂಡಾ ಪಾಲಿಸುವ ಷರತ್ತಿಗೊಳಪಟ್ಟು, ದಿನಾಂಕ:09.10.2014 ರಂದು ಕರ್ತವ್ಯದಿಂದ ಬಿಡುಗಡೆಗೊಳಿಸಿರುವುದನ್ನು ಒಪ್ಪಿ ಅನುಮೋದಿಸಲಾಯಿತು.<br>ಸದರಿ ವೈದ್ಯರಿಗೆ ಉನ್ನತ ವ್ಯಾಸಂಗದ ಅವಧಿಯಲ್ಲಿ ನಿಯಮಾನುಸಾರ ಪಾವತಿಸಬೇಕಾಗುವ ವೇತನ ಮತ್ತು ಭತ್ಯೆಗಳನ್ನು ಪಾವತಿಸಲು ಅನುಮೋದನೆ ನೀಡಲಾಯಿತು. |
| 06 | ಡಾ. ಹರ್ಷವರ್ಧನ.ಎಲ್., ಸಹಾಯಕ ಪ್ರಾಧ್ಯಾಪಕರು, ವೈದ್ಯಶಾಸ್ತ್ರ ವಿಭಾಗ ಇವರನ್ನು ಮೈಸೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವರ್ಗಾವಣೆ ಮಾಡುವ ಕುರಿತು. | ಡಾ. ಹರ್ಷವರ್ಧನ.ಎಲ್., ಸಹಾಯಕ ಪ್ರಾಧ್ಯಾಪಕರು, ವೈದ್ಯಶಾಸ್ತ್ರ ವಿಭಾಗ ಇವರನ್ನು ಮೈಸೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವರ್ಗಾವಣೆ ಮಾಡುವಂತೆ ಕೋರಿ ಮನವಿ ಸಲ್ಲಿಸಿರುತ್ತಾರೆ. ಸದರಿ ವೈದ್ಯರನ್ನು ವರ್ಗಾವಣೆ ಮಾಡುವ ಬಗ್ಗೆ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ಇವರಿಗೆ ಪತ್ರ ಕಳುಹಿಸಲಾಗಿದ್ದಿತು. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಬೆಂಗಳೂರು ರವರ ಪತ್ರ ಸಂಖ್ಯೆ:ವೈ.ಶಿ/ಎಸ್.ಆರ್.ಓ(1)/21/2014-15(ಭಾಗ), ದಿನಾಂಕ:17.11.2014ರ ಪತ್ರದಲ್ಲಿ ಬೋಧಕ ವರ್ಗದವರ ವರ್ಗಾವಣೆ ಬಗ್ಗೆ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈ.ಶಿ), ಬೆಂಗಳೂರುರವರ ನಿರ್ದೇಶನದಂತೆ |



ನಿರ್ದೇಶಕರು 17/12/14
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ.

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ಡಾ. ಹರ್ಷವರ್ಧನ.ಎಲ್. ರವರು ಎಂ.ಎಂ.ಸಿ.ಆರ್.ಐ. ನಲ್ಲಿ ಖಾಲಿ ಇರುವ ವೈದ್ಯಶಾಸ್ತ್ರದ ಹುದ್ದೆಗೆ ನೇಮಕಾತಿ ಮಾಡುವ ಸಮಯದಲ್ಲಿ ಸಾರ್ವಜನಿಕ ಹಿತದೃಷ್ಟಿ ಇದ್ದಲ್ಲಿ ಇವರನ್ನು ಪರಿಗಣಿಸುವಂತೆ ಕ್ರಮ ವಹಿಸಬಹುದು ಎಂದು ಮಾನ್ಯ ಪ್ರಧಾನ ಕಾರ್ಯದರ್ಶಿಗಳು ಅಭಿಪ್ರಾಯಿಸಿರುತ್ತಾರೆ. ಮಾನ್ಯ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ನಿರ್ದೇಶಕರು ಸದರಿ ವಿಷಯವನ್ನು ಆಡಳಿತ ಮಂಡಳಿಯ ಮುಂದೆ ಮಂಡಿಸಲು ಕಡತದ ಮೇಲೆ ಆದೇಶಿಸಿರುವುದರಿಂದ, ಡಾ. ಹರ್ಷವರ್ಧನ.ಎಲ್. ರವರನ್ನು ಎಂಎಂಸಿ ಆರ್.ಐ., ಮೈಸೂರಿಗೆ ವರ್ಗಾವಣೆ ಮಾಡುವ ಬಗ್ಗೆ ಸಂಸ್ಥೆಯ ಆಡಳಿತ ಮಂಡಳಿಯ ಮುಂದೆ ಮಂಡಿಲಾಗಿದೆ ಎಂದು ಸಭೆಗೆ ತಿಳಿಸಿದರು.<br>ಸದರಿ ವಿಷಯವನ್ನು ಕೂಲಂಕುಷವಾಗಿ ಚರ್ಚಿಸಿ ಡಾ.ಹರ್ಷವರ್ಧನ.ಎಲ್‌ರವರನ್ನು ಎಮ್.ಎಮ್.ಸಿ.ಆರ್.ಐ. ಮೈಸೂರು ಇಲ್ಲಿಗೆ ವರ್ಗಾವಣೆ ಮಾಡುವುದರಿಂದ ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಖಾಲಿಯಾಗುವ ಸದರಿ ಹುದ್ದೆಯನ್ನು ಮುಂಬಡ್ತಿ ಮೂಲಕ ಅಥವಾ ನೇರ ಸಂದರ್ಶನದ ಮೂಲಕ ಆಯ್ಕೆ ಮಾಡಿಕೊಳ್ಳಲು ಅವಕಾಶವಿರುವುದರಿಂದ ಸದರಿ ವೈದ್ಯರನ್ನು ಎಮ್.ಎಮ್.ಸಿ.ಆರ್.ಐ. ಮೈಸೂರು ಇಲ್ಲಿಗೆ ವರ್ಗಾವಣೆ ಮಾಡಬಹುದೆಂದು ಒಪ್ಪಿ ಅನುಮೋದಿಸಲಾಯಿತು. |
| 07 | ಡಾ. ಸುಧಾ.ಟಿ.ಆರ್., ಪ್ರಾಧ್ಯಾಪಕರು ಮತ್ತು ವಿಭಾಗ ಮುಖ್ಯಸ್ಥರು, ಪ್ರಸೂತಿ ಮತ್ತು ಸ್ತ್ರೀರೋಗ ವಿಭಾಗ, ಹಿಮ್ಸ್, ಹಾಸನ ಇವರ ವಿರುದ್ಧ ದೋಷಾರೋಪಣೆ ಬಗ್ಗೆ ವಿಚಾರಣಾಧಿಕಾರಿಗಳು ಸಲ್ಲಿಸಿರುವ ವರದಿಯ ಬಗ್ಗೆ. | ಡಾ.ಸುಧಾ.ಟಿ.ಆರ್., ಪ್ರಾಧ್ಯಾಪಕರು ಮತ್ತು ವಿಭಾಗ ಮುಖ್ಯಸ್ಥರು, ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ ಇವರ ಮೇಲೆ ನಡೆದ ಇಲಾಖಾ ವಿಚಾರಣೆಯಲ್ಲಿ ಇವರ ಮೇಲೆ ಮಾಡಿರುವ ಆರೋಪ ರುಜುವಾತಾಗಿರುವುದರಿಂದ ದಿನಾಂಕ:19.08.2014 ರಲ್ಲಿ ಲಿಖಿತ ಹೇಳಿಕೆ ನೀಡಲು ನೋಟೀಸ್ ನೀಡಿದ್ದು, ವಿಚಾರಣಾ ವರದಿಯ ಬಗ್ಗೆ ಲಿಖಿತ ಹೇಳಿಕೆ ಸಲ್ಲಿಸಲು ಉಪಾಧ್ಯಕ್ಷರು, ಆಡಳಿತ ಮಂಡಳಿ ಹಾಗೂ ಮಾನ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,(ವೈ.ಶಿ), ಬೆಂಗಳೂರು ಇವರ ನಿರ್ದೇಶನದಂತೆ 30 ದಿನಗಳ ಕಾಲಾವಕಾಶ ನೀಡಲಾಗಿದ್ದಿತು. ಅದರಂತೆ ಇವರು ದಿನಾಂಕ:22.09.2014 ರಂದು ಸಂಸ್ಥೆಗೆ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ವಿಚಾರಣೆ ಸಾಬೀತಾಗಿರುವುದಕ್ಕೆ ಸಂಪೂರ್ಣ ಒಪ್ಪಿಗೆ ಇರುವುದಿಲ್ಲವೆಂದು ಇವರ ಹೇಳಿಕೆಯಲ್ಲಿ ಸಾಬೀತಾಗಿರುವ ಆರೋಪಗಳನ್ನು ನಿರಾಕರಿಸಿರುತ್ತಾರೆ ಹಾಗೂ ವಿಚಾರಣಾಧಿಕಾರಿ ವರದಿಯನ್ನು ಒಪ್ಪಿರುವುದಿಲ್ಲ. ಲಿಖಿತ ಹೇಳಿಕೆಯ ಬಗ್ಗೆ ನೌಕರರಿಗೆ ಸಂಸ್ಥೆಗೆ ನೇಮಕ ಮಾಡಿಕೊಂಡಿರುವ ವಕೀಲರಿಗೆ ಕಾನೂನು ಸಲಹೆ ಕೋರಿ |



ನಿರ್ದೇಶಕರು 17/12/14
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ದಿನಾಂಕ:29.09.2014 ರಂದು ಬರೆಯಲಾಗಿದ್ದಿತು. ಅದರಂತೆ ಸಂಸ್ಥೆಯ ವಕೀಲರು ದಿನಾಂಕ:10.10.2014 ರಲ್ಲಿ ಇವರ ಮೇಲೆ ಮೂರು ಆರೋಪ ರುಜುವಾತಾಗಿರುವುದರಿಂದ ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತಾರೆ.<br>It is seen from the file that the said doctor is still under probation, further from the enquiry report it is clear that the said Doctor in the course of performing her duties has done some financial commitments without sanction from the Institution which appears to be a serious offence under the relevant rules. Under these circumstances the competent authority of the Institution can take serious action against Dr. Sudha.T.R. in the matter.<br>ಈ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿ ಇಲಾಖಾ ವಿಚಾರಣೆಯಲ್ಲಿ ವಿಚಾರಣಾಧಿಕಾರಿಗಳು ನೀಡಿರುವ ವರದಿ ಮತ್ತು ಸಂಸ್ಥೆಯ ವಕೀಲರು ನೀಡಿರುವ ಅಭಿಪ್ರಾಯ ಇವೆರಡನ್ನು ಆದರಿಸಿ ಡಾ. ಸುಧಾ.ಟಿ.ಆರ್. ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ಪ್ರಸೂತಿ ಮತ್ತು ಸ್ತ್ರೀ ರೋಗ ವಿಭಾಗ, ಹಿಮ್ಸ್, ಹಾಸನ ಇವರನ್ನು ಸೇವೆಯಿಂದ ವಜಾಗೊಳಿಸುವುದು ಎಂದು ಸಭೆಯು ಸರ್ವಾನುಮತದಿಂದ ತೀರ್ಮಾನಿಸಲಾಯಿತು. |
| 08 | ಮೆ. ಕೋನಿ ಟೆಕ್ನಾಲಜಿಸ್, ಬೆಂಗಳೂರು. ಇವರ ಮನವಿ ಪತ್ರದ ಬಗ್ಗೆ. | ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ 3ವರ್ಷಗಳ ಅವಧಿಗೆ (2008-09 ರಿಂದ 2010-11) ನೆಟ್‌ವರ್ಕಿಂಗ್ ನಿರ್ವಹಣೆಗೆ ಸಂಬಂಧಿಸಿದಂತೆ 14 ಗಣಕ ಯಂತ್ರಗಳ ನಿರ್ವಹಣೆ / ಸಾಫ್ಟ್‌ವೇರ್ ನಿರ್ವಹಣೆ/ ಒಳ ರೋಗಿ ಕೇಸ್ ಶೀಟ್/ ಹೊರ ರೋಗಿ ಪುಸ್ತಕ/ ರಶೀದಿಗಳು/ ತಪಾಸಣೆ ಮುದ್ರಿತ ಬೇಡಿಕೆ ಪತ್ರ/ ಪ್ರಿಂಟರ್ ನಿರ್ವಹಣೆ/ ಮತ್ತು 18 ಸಿಬ್ಬಂದಿಗಳ ವೇತನ ವೆಚ್ಚ ಸೇರಿದಂತೆ ಮಾಸಿಕ ಟೆಂಡರ್ ಮೊತ್ತ ರೂ.2,32,000-00ಗಳಿಗೆ ಮೆ. ಕೋನಿ ಟೆಕ್ನಾಲಜಿಸ್, ಬೆಂಗಳೂರು ಇವರಿಗೆ ಟೆಂಡರ್ ಮೂಲಕ ಕಾರ್ಯಾದೇಶ ನೀಡಲಾಗಿರುತ್ತದೆ. ಸದರಿ ಸಂಸ್ಥೆಯ ಟೆಂಡರ್ ಅವಧಿಯು ದಿನಾಂಕ:09-09-2011ಕ್ಕೆ ಮುಗಿದಿದ್ದು. 2011-12ನೇ ಸಾಲಿಗೆ ಹೊಸ ನೆಟ್‌ವರ್ಕಿಂಗ್ ಟೆಂಡರ್ ಪ್ರಕ್ರಿಯೆಯನ್ನು ದಿನಾಂಕ: 29-08-2011 ರಂದು ಕರೆಯಲಾಗಿ ಟೆಂಡರ್‌ನಲ್ಲಿ ಭಾಗವಹಿಸಿದ್ದ ಟೆಂಡರ್‌ದಾರರ ಆಕ್ಷೇಪಣೆಗಳಿಂದಾಗಿ ಟೆಂಡರ್ ಪ್ರಕ್ರಿಯೆಯು ಪೂರ್ಣಗೊಳಿಸದೇ ಸ್ಥಗಿತಗೊಂಡಿರುತ್ತದೆ. |



ನಿರ್ದೇಶಕರು 17/11/14
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಸಂ. | ವಿಷಯ | ತೀರ್ಮಾನ |
|---|---|---|
| | | ದಿನಾಂಕ: 13.06.2014 ರಂದು ನಡೆದ 18ನೇ ಆಡಳಿತ ಮಂಡಳಿ ಸಬೆಯಲ್ಲಿ ಸದರಿ ವಿಷಯವನ್ನು ಚರ್ಚಿಸಲಾಗಿ ಕರ್ನಾಟಕ ಸರ್ಕಾರದ ಅಧಿಕೃತ ನೆಟ್‌ವರ್ಕಿಂಗ್ ಸೇವೆಯನ್ನು ಒದಗಿಸುವ National Information Center (NIC) ಬೆಂಗಳೂರು ಇವರೊಂದಿಗೆ ಪತ್ರ ವ್ಯವಹಾರ ನಡೆಸಿ ಸದರಿ ಸಂಸ್ಥೆಯ ಮುಖಾಂತರ ನೆಟೆವರ್ಕಿಂಗ್ ಸೌಲಭ್ಯವನ್ನು ಪಡೆದುಕೊಳ್ಳುವಂತೆ ತೀರ್ಮಾನಕೈಗೊಳ್ಳಲಾಗಿರುತ್ತದೆ. ಆಡಳಿತ ಮಂಡಳಿ ಸಭೆಯ ತೀರ್ಮಾನದಂತೆ ದಿನಾಂಕ 23.07.2014 ರಂದು NIC ಬೆಂಗಳೂರು ಇವರಿಗೆ ಪತ್ರ ಬರೆಯಲಾಗಿರುತ್ತದೆ. NIC ಬೆಂಗಳೂರು. ರವರ ನಿರ್ದೇಶನದಂತೆ District Informatics Officer , NIC Hassan ರವರು ದಿನಾಂಕ:19.11.2014 ರಂದು ಸಂಸ್ಥೆಗೆ ಪತ್ರ ಬರೆದು ಕೆಲವೊಂದು ಮಾಹಿತಿಗಳನ್ನು ಒದಗಿಸಲು ಕೋರಿರುತ್ತಾರೆ. ಸದರಿಯವರು ಕೋರಿರುವ ಮಾಹಿತಿಗಳನ್ನು ದಿನಾಂಕ 26.11.2014 ರಂದು ಸಲ್ಲಿಸಲಾಗಿರುತ್ತದೆ.<br>ಮೆ. ಕೋನಿ ಟೆಕ್ನಾಲಜಿಸ್, ಬೆಂಗಳೂರು. ಇವರು 2008-09 ನೇ ಸಾಲಿನಿಂದ ಪ್ರಸುತ್ತ ದಿನಾಂಕದವರೆಗೂ ಮಾಹೆಯಾನ ರೂ.2,32,000-00 ನಿರ್ವಹಣಾ ವೆಚ್ಚದಲ್ಲೇ ಕಾರ್ಯನಿರ್ವಹಿಸುತ್ತಿದ್ದು. 2011 ರಿಂದೀಚೆಗೆ ಮುದ್ರಣ ಬೆಲೆ ಗರಿಷ್ಟ ಪ್ರಮಾಣದಲ್ಲಿ ಹೆಚ್ಚಾಗಿದ್ದು, ಆಸ್ಪತ್ರೆಯ ಹೊರ ರೋಗಿಗಳ ಮತ್ತು ಒಳ ರೋಗಿಗಳ ಸಂಖ್ಯೆ ಹೆಚ್ಚಾಗಿದ್ದು ಈ ಸಂಬಂದ ದಾಖಲೆಗಳ ನಿರ್ವಹಣೆ ಸಲುವಾದ ಮುದ್ರಣ ಮತ್ತು ಇತರೆ ನಮೂನೆಗಳ ಮುದ್ರಣ ವೆಚ್ಚವೂ ಸಹ ಗಣನೀಯವಾಗಿ ಏರಿದ್ದು ಮುದ್ರಣ ವೆಚ್ಚದ ನಿರ್ವಹಣೆಯೂ ಸಹ ತ್ರಾಸದಾಯಕವಾಗಿರುತ್ತದೆ. ಹಾಗೂ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳಿಗೆ ವೇತನ , ಇಪಿಎಫ್, ಇಎಸ್‌ಐ ಹಾಗೂ ಇತರೆ ಭತ್ಯೆಗಳಲ್ಲಿ ಗಣನೀಯ ಏರಿಕೆಯಾಗಿದ್ದು ನಮ್ಮ ಸಂಸ್ಥೆಗೆ ಆರ್ಥಿಕ ಹೊರೆಯಾಗುತ್ತಿರುವುದರಿಂದ ಈ ಹೆಚ್ಚಿನ ಆರ್ಥಿಕ ಹೊರೆಯನ್ನು ನಿರ್ವಹಿಸಲು ಸಾಧ್ಯವಾಗದೆ ಇರುವುದರಿಂದ ಶೇಕಡ 35 ರಷ್ಟು ಹೆಚ್ಚುವರಿ ಮೊಬಲಗನ್ನು ಬಿಡುಗಡೆ ಮಾಡುವಂತೆ ಕೋರಿ ಈ ಬಗ್ಗೆ ಕ್ರಮ ವಹಿಸದಿದ್ದಲಿ ತಮ್ಮ ಸೇವೆಯನ್ನು ಹಿಂಪಡೆಯುವುದಾಗಿ ಪತ್ರ ಬರೆದಿರುತ್ತಾರೆಂದು ವಿಷಯವನ್ನು ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>ಸಂಸ್ಥೆಯ ನೆಟ್‌ವರ್ಕಿಂಗ್ ನಿರ್ವಹಣೆಗೆ ಸಂಬಂದಿಸಿದಂತೆ, ಎನ್.ಐ.ಸಿ. ಇವರೊಂದಿಗೆ ಪತ್ರ ವ್ಯವಹಾರ ನಡೆಸಲಾಗಿರುತ್ತದೆ. ಸದರಿ ಸಂಸ್ಥೆಯ ಮೂಲಕ ಸಾಫ್ಟ್‌ವೇರ್ ಅಳವಡಿಸಿಕೊಳ್ಳುವುದು |



ನಿರ್ದೇಶಕರು 31/12/14
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ಸೂಕ್ತವೆಂದು ಅಭಿಪ್ರಾಯ ಪಡಲಾಯಿತು ಈ ಪ್ರಕ್ರಿಯೆಯನ್ನು ಪೂರ್ಣಗೊಳಿಸಲು ಕಾಲಾವಕಾಶ ಬೇಕಾಗುವುದರಿಂದ ಮಾರ್ಚ್ –2016ರ ಅವಧಿಯವರೆಗೆ ಮೆ. ಕೋನಿ ಟೆಕ್ನಾಲಜೀಸ್, ಬೆಂಗಳೂರು ಇವರ ಸೇವೆಯನ್ನು ಮುಂದುವರಿಸಿಕೊಂಡು ಹೋಗುವುದೆಂದು ತೀರ್ಮಾನಿಸಿ ಅಲ್ಲಿಯವರೆಗೆ ಸದರಿ ಸಂಸ್ಥೆಗೆ ಹಾಲಿ ಪಾವತಿಸುತ್ತಿರುವ ಮಾಸಿಕ ನಿರ್ವಹಣಾ ವೆಚ್ಚ ರೂ.2,32,000.00 (ರೂ. ಎರಡು ಲಕ್ಷ ಮೂವತ್ತೆರಡು ಸಾವಿರ ಮಾತ್ರ) ಗಳಿಂದ ರೂ.2,50,000.00 ಗಳಿಗೆ ಹೆಚ್ಚಿಸಿ (ರೂ.ಎರಡು ಲಕ್ಷದ ಐವತ್ತು ಸಾವಿರ ಮಾತ್ರ) ಪಾವತಿಸುವುದೆಂದು ತೀರ್ಮಾನಿಸಲಾಯಿತು. |
| 09 | ಡಾ.ಸುರೇಶ್. ಎಂ.ಆರ್. ಸಹಾಯಕ ಪ್ರಾಧ್ಯಾಪಕರು, ಚರ್ಮರೋಗ ವಿಭಾಗ ಇವರ ವಿರುದ್ಧದ ದೂರುಗಳ ಬಗ್ಗೆ ಕ್ರಮ ಕೈಗೊಳ್ಳುವ ಬಗ್ಗೆ. | ಡಾ.ಸುರೇಶ್. ಎಂ.ಆರ್. ಸಹಾಯಕ ಪ್ರಾಧ್ಯಾಪಕರು, ಚರ್ಮರೋಗ ವಿಭಾಗ ಇವರ ವಿರುದ್ಧದ ದೂರುಗಳ ಬಗ್ಗೆ ಕ್ರಮ ಕೈಗೊಳ್ಳುವ ವಿಷಯದ ಬಗ್ಗೆ ಈ ಕೆಳಕಂಡ ವಿವರಗಳನ್ನು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ಮಂಡಿಸಿದರು.<br>ಡಾ.ಸುರೇಶ್‌ರವರ ಕರ್ತವ್ಯ ಲೋಪಗಳ ಬಗ್ಗೆ ದಿನಾಂಕ:30–05–2012ರಂದು ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಮುಖ್ಯ ಆಡಳಿತಾಧಿಕಾರಿಗಳಿಂದ ವಿಚಾರಣೆ ನಡೆಸಲಾಗಿರುತ್ತದೆ. ವಿಚಾರಣಾಧಿಕಾರಿಗಳು ತಮ್ಮ ವರದಿಯನ್ನು ಸಲ್ಲಿಸಿದ್ದು ಸದರಿ ವರದಿಯನ್ನು ಸಂಸ್ಥೆಯ 18ನೇ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಲಾಗಿದ್ದರೂ ಯಾವುದೇ ತೀರ್ಮಾನವಾಗದೆ ಮುಂದೂಡಲ್ಪಟ್ಟಿರುತ್ತದೆ.<br>ಜೊತೆಗೆ ಸದರಿ ವಿಚಾರಣೆ ನಡೆದ ನಂತರವೂ ಡಾ.ಸುರೇಶ್.ರವರು ವಿಭಾಗ ಮುಖ್ಯಸ್ಥರ ಮತ್ತು ಸಂಸ್ಥೆಯ ನಿರ್ದೇಶಕರ ವಿರುದ್ಧ ಅನುಮತಿ ಪಡೆಯದೆ ಎಂ.ಸಿ.ಐ.ಗೆ ಲೋಕಾಯುಕ್ತಕ್ಕೆ ಮುಂತಾದೆಡೆ ದೂರು ನೀಡುವುದು ಸೇರಿದಂತೆ ತಮ್ಮ ಕರ್ತವ್ಯ ಲೋಪಗಳನ್ನು ಹಾಗೂ ದುರ್ವರ್ತನೆಗಳನ್ನು ಮುಂದುವರೆಸಿರುವ ಬಗ್ಗೆ ದೂರುಗಳಿದ್ದು, ಕೆಳಕಂಡಂತೆ ಡಾ.ಸುರೇಶ್‌ರವರ ವಿರುದ್ಧ ನಿಯಮಾನುಸಾರ ನೋಟೀಸ್‌ಗಳನ್ನು ನೀಡಲಾಗಿದೆ.<br>01)ದಿನಾಂಕ:05–04–2013ರಂದು ಎಲ್.ಐ.ಸಿ. ಪರಿವೀಕ್ಷಣೆ ಸಂದರ್ಭದಲ್ಲಿ ಸಂಸ್ಥೆಯ ನಿರ್ದೇಶಕರ ವಿರುದ್ಧ ಅಗೌರವದಿಂದ ನಡೆದುದರ ಬಗ್ಗೆ ನೋಟೀಸ್ ನೀಡಲಾಗಿರುತ್ತದೆ. (ಹಿಮ್ಸ್/ಸಿ(2)/01/2013–14/ ಆಡಳಿತ1/ 2013–14).<br>02) ದಿನಾಂಕ:03–07–2013ರಂದು ವಾರ್ಷಿಕ ಕಾರ್ಯ ನಿರ್ವಹಣಾ ವರದಿಯನ್ನು ನಿಯಮಾನುಸಾರ ನೀಡದಿದ್ದರ ಬಗ್ಗೆ (ಹಿಮ್ಸ್/ಸಿ(1)/26/2012–13/ 188–3). |



ನಿರ್ದೇಶಕರು 17/12/14
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರಸಂ. | ವಿಷಯ | ತೀರ್ಮಾನ |
|---|---|---|
| | | 03) ದಿನಾಂಕ:24-11-2014ರಂದು ವಿಭಾಗದ ಮುಖ್ಯಸ್ಥರ ವಿರುದ್ಧ ನೇರವಾಗಿ ಲೋಕಾಯುಕ್ತಕ್ಕೆ ದೂರು ನೀಡಿದ್ದರ ಬಗ್ಗೆ ನೋಟೀಸ್ ನೀಡಲಾಗಿರುತ್ತದೆ. (ಹಿಮ್ಸ್/ಸಿ(2)/04/2014-15 /659/2/01/1 ).<br>04) ಫೇಸ್ ಬುಕ್ ಮತ್ತು ವಾಟ್ಸ್‌ಪ್ ಜಾಲತಾಣಗಳಲ್ಲಿ ಡಾ.ಸುರೇಶ್‌ರವರು ತನ್ನ ಚಾರಿತ್ರ್ಯ ವಧೆ ಮಾಡಿರುವ ಬಗ್ಗೆ ಸಂಸ್ಥೆಯ ಪ್ರಾಂಶುಪಾಲರು ದೂರು ನೀಡಿ ಮಾನ ನಷ್ಟ ಮೊಕದ್ದಮೆ ಹೂಡಲು ಅನುಮತಿ ಕೋರಿರುತ್ತಾರೆ.<br>05) ದಿನಾಂಕ:02-12-2014ರಂದು ಸಂಸ್ಥೆಯ ನಿರ್ದೇಶಕರ ಹಾಗೂ ವಿಭಾಗದ ಮುಖ್ಯಸ್ಥರ ವಿರುದ್ಧ ನೇರವಾಗಿ ಭಾರತೀಯ ವೈದ್ಯಕೀಯ ಪರಿಷತ್ತಿಗೆ ದೂರು ನೀಡಿದ್ದರ ಬಗ್ಗೆ ಡಾ.ಸುರೇಶ್.ಎಂ.ಆರ್.ರವರ ವಿರುದ್ಧ ನೋಟೀಸ್ ನೀಡಲಾಗಿರುತ್ತದೆ. (ಹಿಮ್ಸ್ /ಸಿ(2)04/2013-14).<br>06)ದಿನಾಂಕ:23-07-2013ರಂದು 7 ಆರೋಪಗಳ ಬಗ್ಗೆ ನೋಟೀಸ್ ನೀಡಲಾಗಿರುತ್ತದೆ. (ಹಿಮ್ಸ್ /ಸಿ(2)/04/2013-14).<br>07) ದಿನಾಂಕ:21-05-2014ರಂದು ಡಾ.ಸುರೇಶ್.ಎಂ.ಆರ್.ರವರು ಅನಧಿಕೃತ ಗೈರು ಹಾಜರಾಗಿದ್ದಲ್ಲದೆ ಪರಿವರ್ತಿತ ರಜೆಗೆ ಘಟನೋತ್ತರವಾಗಿ ಅರ್ಜಿ ಸಲ್ಲಿಸುವಾಗ ಅವಾಚ್ಯ ಶಬ್ದಗಳಿಂದ ಚರ್ಮರೋಗ ವಿಭಾಗದ ಮುಖ್ಯಸ್ಥರನ್ನು ನಿಂದಿಸಿದ್ದ ಬಗ್ಗೆ ನೋಟೀಸ್ ನೀಡಲಾಗಿರುತ್ತದೆ.(ಹಿಮ್ಸ್/ಸಿ(2)/04/2013-14).<br>08) ದಿನಾಂಕ:01-07-2014ರಂದು ಸಂಸ್ಥೆಯ ನಿರ್ದೇಶಕರ ಹಾಗೂ ವಿಭಾಗದ ಮುಖ್ಯಸ್ಥರ ವಿರುದ್ಧ ನೇರವಾಗಿ ಮಾನವ ಹಕ್ಕು ಆಯೋಗಕ್ಕೆ ದೂರು ನೀಡಿದ್ದರ ಬಗ್ಗೆ (ಹಿಮ್ಸ್ /ಸಿ(2)/04/2013-14).<br>ಈ ಎಲ್ಲಾ ನೋಟೀಸ್‌ಗಳಿಗೆ ನೀಡಿರುವ ತಮ್ಮ ಸಮಜಾಯಿಷಿಗಳಲ್ಲಿ ಡಾ.ಸುರೇಶ್‌ರವರು ಬಹುತೇಕ ಅಸಂಮಂಜಸ ಉತ್ತರ ನೀಡಿರುವುದು ಕಂಡು ಬಂದಿರುತ್ತದೆ. ಜೊತೆಗೆ ಇವರ ವಿಭಾಗ ಮುಖ್ಯಸ್ಥರು ನೀಡಿರುವ ಡಾ.ಸುರೇಶ್‌ರವರ ಪ್ರತಿಕೂಲ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳು ಮೇಲ್ಕಂಡ ಆರೋಪಗಳಿಗೆ ಸಂಬಂಧಿಸಿರುವುದರಿಂದ ಈ ವಿಷಯ ಇತ್ಯರ್ಥವಾಗಬೇಕಾಗಿರುತ್ತದೆ. ಅದೇ ರೀತಿ ತಡೆಹಿಡಿಯಲಾಗಿರುವ ಡಾ.ಸುರೇಶ್‌ರವರ ಪದೋನ್ನತಿ/ಕಾಲಬದ್ಧ ಪದೋನ್ನತಿ ವಿಚಾರವೂ ಇತ್ಯಾರ್ಥವಾಗಬೇಕಾದಲ್ಲಿ ನಿಯಮಾನುಸಾರ ಕ್ರಮ ತೆಗೆದುಕೊಳ್ಳಬೇಕಾಗಿರುತ್ತದೆ. ಎಂದು ಸಂಸ್ಥೆಯ ನಿರ್ದೇಶಕರು ಸಭೆಯ ಮುಂದೆ ವಿಷಯವನ್ನು ಪ್ರಾಸ್ತಾಪಿಸಿದರು. |



7/12/14
ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ಸದರಿ ವಿಷಯದ ಬಗ್ಗೆ ಕೂಲಂಕುಷವಾಗಿ ಚರ್ಚಿಸಿದ ಸರ್ಕಾರದ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆಕುಕ (ವೈ.ಶಿ) ಹಾಗೂ ಆಡಳಿತ ಮಂಡಳಿಯ ಉಪಾಧ್ಯಕ್ಷರು, ಹಿಮ್ಸ್, ಹಾಸನ ಇವರು ಈ ವಿಷಯವು 18ನೇ ಆಡಳಿತ ಮಂಡಳಿ ಸಭೆಯಲ್ಲಿ ಪ್ರಸ್ತಾಪಿಸಲ್ಪಟ್ಟು ವಿಷಯವು ಮುಂದೂಡಲ್ಪಟ್ಟಿರುತ್ತದೆ. ಸದರಿ ವಿಷಯವನ್ನು 19 ಮತ್ತು 20ನೇ ಆಡಳಿತ ಮಂಡಳಿ ಸಭೆಯಲ್ಲಿ ಮಂಡಿಸಿದೆ ಇರುವುದಕ್ಕೆ ಕಾರಣವೇನೆಂದು ಪ್ರಶ್ನಿಸಿ ಇದರ ಬಗ್ಗೆ ಸಂಬಂಧಿಸಿದವರಿಗೆ ನೋಟೀಸ್ ಜಾರಿಗೊಳಿಸಿ ಎಂದು ತಿಳಿಸಿದರು.<br>ಸಂಸ್ಥೆಯ ನಿರ್ದೇಶಕರು 19ನೇ ಆಡಳಿತ ಮಂಡಳಿ ಸಭೆಯಲ್ಲಿ ಒಂದು ವಿಷಯಕ್ಕೆ ಮಾತ್ರ ಮೀಸಲಾಗಿರುವುದರಿಂದ ಈ ವಿಷಯವನ್ನು ಮಂಡಿಸಲು ಅವಕಾಶವಾಗಿರುವುದಿಲ್ಲ ಮತ್ತು ಆಕಸ್ಮಿಕವಾಗಿ 20ನೇ ಆಡಳಿತ ಮಂಡಳಿಯಲ್ಲಿ ವಿಷಯವು ಕೈ ಬಿಟ್ಟಿರುತ್ತದೆ. ಆದುದರಿಂದ ಸದರಿ ವಿಷಯವನ್ನು ಡಿ.ಪಿ.ಸಿಯಲ್ಲಿ ಮಂಡಿಸಲು ಕ್ರಮ ಕೈಗೊಳ್ಳಲಾಗಿತ್ತು. ಸದರಿ ವಿಷಯದಲ್ಲಿ ಗೊಂದಲ ಉಂಟಾಗಿದ್ದರಿಂದ ತೀರ್ಮಾನವಾಗದೆ ಬಾಕಿ ಇರುತ್ತದೆಂದು ತಿಳಿಸಿದರು.<br>ಡಾ.ಸುರೇಶ್.ಎಮ್.ಆರ್.ರವರ ನಡವಳಿಕೆಗಳು ಸರ್ಕಾರದ ನಿಯಮಗಳಿಗೆ ವಿರುದ್ಧವಾಗಿರುವುದರಿಂದ ಡಾ.ಸುರೇಶ್.ಎಂ.ಆರ್. ಸಹಾಯಕ ಪ್ರಾಧ್ಯಾಪಕರು, ಚರ್ಮರೋಗ ವಿಭಾಗ ಇವರನ್ನು ಅಮಾನತ್ತುಗೊಳಿಸುವುದು ಸೂಕ್ತವೆಂದು ಸರ್ಕಾರದ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಆಕುಕ (ವೈ.ಶಿ) ಹಾಗೂ ಆಡಳಿತ ಮಂಡಳಿಯ ಉಪಾಧ್ಯಕ್ಷರು, ಹಿಮ್ಸ್, ಹಾಸನ ಇವರು ತಮ್ಮ ಅಭಿಪ್ರಾಯವನ್ನು ಸಭೆಗೆ ತಿಳಿಸಿದರು.<br>ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಹಾಗೂ ಆಡಳಿತ ಮಂಡಳಿಯ ಅಧ್ಯಕ್ಷರು, ಹಿಮ್ಸ್, ಹಾಸನರವರು ಸದರಿ ವೈದ್ಯರನ್ನು ಬೇರೆ ಸಂಸ್ಥೆಗೆ ವರ್ಗಾವಣೆ ಮಾಡಿ ಅಥವಾ ಇಲಾಖಾ ವಿಚಾರಣೆ ನಡೆಸಿ ಶಿಸ್ತು ಕ್ರಮ ಕೈಗೊಳ್ಳಬಹುದು ಸೂಕ್ತವೆಂದು ತಮ್ಮ ಅಭಿಪ್ರಾಯವನ್ನು ತಿಳಿಸಿದರು.<br>ಎಲ್ಲಾ ವಿಷಯಗಳನ್ನು ಕೂಲಂಕುಷವಾಗಿ ಚರ್ಚಿಸಿ ಡಾ.ಸುರೇಶ್.ಎಮ್.ಆರ್. ಇವರ ಮೇಲೆ ಚಾರ್ಜ್‌ಶೀಟ್ ತಯಾರಿಸಿ ಷೋಕಾಸ್ ನೋಟೀಸ್ ಜಾರಿಗೊಳಿಸುವುದೆಂದು ಮತ್ತು ಇಲಾಖಾ ವಿಚಾರಣೆ ನಡೆಸಲು ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದರಾವ್ ವೃತ್ತ, |



ನಿರ್ದೇಶಕರು 7/12/14
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ಬೆಂಗಳೂರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಕ ಮಾಡಿ ಇದರ ಬಗ್ಗೆ ವಿಚಾರಣೆ ನಡೆಸಿ ವರದಿಯನ್ನು ಸಲ್ಲಿಸುವಂತೆ ಸರ್ವಾನುಮತದಿಂದ ತೀರ್ಮಾನಿಸಲಾಯಿತು. ವಿಚಾರಣೆ ಮುಗಿಯುವವರೆಗೂ ಡಾ.ಸುರೇಶ್.ಎಮ್.ಆರ್., ಸಹಾಯಕ ಪ್ರಾಧ್ಯಾಪಕರು, ಚರ್ಮರೋಗ ವಿಭಾಗ ಇವರನ್ನು ಬೋಧನಾ ಚಟುವಟಿಕೆಗಳಿಂದ ದೂರವಿರಿಸುವುದೆಂದು ತೀರ್ಮಾನ ಕೈಗೊಳ್ಳಲಾಯಿತು. |
| 10 | ಅಧ್ಯಕ್ಷರ ಅಪ್ಪಣೆ ಮೇರೆಗೆ ಇತರೆ ವಿಷಯಗಳು | 1) ಹಿಮ್ಸ್, ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿರುವ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ವರ್ಗದವರಿಗೆ ಸರ್ಕಾರಿ ಸೇವಾ ನಿಯಮಗಳ ಅನುಸಾರ ಕಾಲಬದ್ಧ ಪದೋನ್ನತಿ ನೀಡುವುದರ ಬಗ್ಗೆ ಚರ್ಚಿಸಲಾಗಿ ಬೋಧಕ ಸಿಬ್ಬಂದಿಯವರಿಗೆ ಎ.ಐ.ಸಿ.ಟಿ. ಪರಿಷ್ಕೃತ ಆದೇಶ ಆಕುಕ 04 ಎಮ್.ಎಮ್.ಸಿ. 2010, ದಿನಾಂಕ: 16-12-2011ರಲ್ಲಿ ಈ ನಿಯಮದ ಪ್ರಕಾರ ಪದೋನ್ನತಿ ಬಡ್ತಿ ನೀಡಲು ಹಾಗೂ ಬೋಧಕೇತರ ಸಿಬ್ಬಂದಿಯವರಿಗೆ ಕರ್ನಾಟಕ ಸರ್ಕಾರ ರಾಜ್ಯ ಸರ್ಕಾರಿ ನೌಕರರಿಗೆ ನಿಗದಿಪಡಿಸಿರುವ ಕಾಲಬದ್ಧ ಪದೋನ್ನತಿಗಳನ್ನು ಅನುಸರಿಸಿ ಸಂಸ್ಥೆಯ ಡಿ.ಪಿ.ಸಿ. ಸಭೆಯಲ್ಲಿ ಮಂಡಿಸಿ ತೀರ್ಮಾನ ಕೈಗೊಂಡು ನಂತರ ಕಾಲಬದ್ಧ ಪದೋನ್ನತಿ ನೀಡುವುದೆಂದು ತೀರ್ಮಾನಿಸಲಾಯಿತು.<br>2) ಡಾ.ಪ್ರವೀಣ್ ಕುಮಾರ್.ಈ.ಇನಾಂದಾರ್, ಪ್ರಾಧ್ಯಾಪಕರು, ನ್ಯಾಯ ವೈದ್ಯಶಾಸ್ತ್ರ ವಿಭಾಗ ಇವರ ಮೇಲೆ ದಿನಾಂಕ: 08-09-2014ರಂದು ನಡೆದ ಆಡಳಿತ ಮಂಡಳಿ ಸಭೆಯಲ್ಲಿ ನಿರ್ಣಯ ಕೈಗೊಂಡಿದ್ದ ವಿಷಯದ ಬಗ್ಗೆ ಪುನರ್ ಪರಿಶೀಲಿಸಲಾಯಿತು. ಜಿಲ್ಲಾ ಪೋಲೀಸ್ ಅಧೀಕ್ಷಕರು, ಹಾಸನ ಜಿಲ್ಲೆ, ಹಾಸನ ಇವರ ಪತ್ರ ಸಂಖ್ಯೆ: ಅಪರಾಧ(1) ಆಲೂರು/351/2013, ದಿನಾಂಕ:02-06-2014ರಲ್ಲಿ ಪ್ರಾಧ್ಯಾಪಕರು ಮತ್ತು ಮುಖ್ಯಸ್ಥರು, ನ್ಯಾಯ ವೈದ್ಯಶಾಸ್ತ್ರ ವಿಭಾಗ, ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು ಇವರಿಗೆ ಸದರಿ ಶವ ಪರೀಕ್ಷೆಯ ಬಗ್ಗೆ ಹಾಗೂ ದಾಖಲಾತಿಗಳನ್ನು ಪರಿಶೀಲಿಸಿ ಸ್ಪಷ್ಟ ಅಭಿಪ್ರಾಯ ನೀಡಲು ಕೋರಿರುತ್ತಾರೆ. ನ್ಯಾಯ ವೈದ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಭೀಮಪ್ಪ ಹವನೂರು ಮತ್ತು ಡಾ.ವೆಂಕಟರಾಘವ್, ಸಹಪ್ರಾಧ್ಯಾಪಕರು, ವಿಕ್ಟೋರಿಯಾ ಆಸ್ಪತ್ರೆ, ಬಿ.ಎಮ್.ಸಿ.ಆರ್.ಐ. ಬೆಂಗಳೂರು ಇವರು ನೇರವಾಗಿ ಪೋಲೀಸ್ ಅಧೀಕ್ಷಕರು, ಹಾಸನ ಜಿಲ್ಲೆ, ಹಾಸನ ಇವರಿಗೆ, ಪತ್ರ ಬರೆದು ಸದರಿ ಶವ ಪರೀಕ್ಷಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಿ, ಇವರ ಅಭಿಪ್ರಾಯ "DEATH WAS DUE TO CONSEQUENCES OF METASTASIS IN BRAIN AND LUNG, PRIMARY BEING UNDETECTED (NATURAL DEATH)`` |



ನಿರ್ದೇಶಕರು 17/12/14
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

| ಅಜೆಂಡಾ ಕ್ರ.ಸಂ. | ವಿಷಯ | ತೀರ್ಮಾನ |
|---|---|---|
| | | ಎಂದು ನೀಡಿದ್ದಾರೆ ಎಂಬ ಅಂಶವನ್ನು ನಿರ್ದೇಶಕರು, ಮಂಡಳಿ ಮುಂದೆ ಮಂಡಿಸಿದರು.<br>ವಿಷಯವನ್ನು ಚರ್ಚಿಸಲಾಗಿ ಸದರಿಯವರು ನಡೆಸಿರುವ ಶವ ಪರೀಕ್ಷಾ ವರದಿಗೂ ಮತ್ತು ಬೆಂಗಳೂರುರವರು ನಡೆಸಿದ್ದ ಶವಪರೀಕ್ಷಾ ವರದಿ ಎರಡು ಒಂದೇ ಆಗಿರುವುದರಿಂದ ಶವಪರೀಕ್ಷಾ ವರದಿಯು ತಪ್ಪಾಗಿದೆ ಎಂದು ಒಪ್ಪಲು ಸಾಧ್ಯವಿಲ್ಲವೆಂದು ತೀರ್ಮಾನಿಸಿ ಈ ಕಡತವನ್ನು ಮುಕ್ತಾಯಗೊಳಿಸಲಾಯಿತು.ಸದರಿಯವರು ಖಾಯಂ ಪೂರ್ವಸೇವಾವಧಿಯನ್ನು ಘೋಷಿಸಬಹುದೆಂದು ತೀರ್ಮಾನಿಸಲಾಯಿತು.<br>3) 2013-14ನೇ ಸಾಲಿನ ಆಡಿಟ್‌ವರದಿಯನ್ನು ಸಂಸ್ಥೆಯ ಆರ್ಥಿಕ ಸಮಿತಿ ಸಭೆಯಲ್ಲಿ ಮಂಡಿಸಿ ಅನುಮೋದನೆ ಪಡೆದು ನಂತರ ಸಂಸ್ಥೆಯ ಆಡಳಿತ ಮಂಡಳಿ ಸಭೆಯ ಮುಂದೆ ಅನುಮೋದನೆಗಾಗಿ ಮಂಡಿಸುವಂತೆ ಸೂಚಿಸಲಾಯಿತು.<br>ವಂದನೆಗಳೊಂದಿಗೆ ಸಭೆ ಮುಕ್ತಾಯವಾಯಿತು. |

(ಡಾ.ಎನ್.ರಾಚೇಗೌಡ),
ನಿರ್ದೇಶಕರು ಹಾಗೂ
ಸದಸ್ಯ ಕಾರ್ಯದರ್ಶಿ, ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಹಾಸನ.

ನಿರ್ದೇಶಕರು
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ
ಹಾಸನ

(ಶ್ರೀ. ಎನ್.ಶಿವಶೈಲಂ) ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ,
ವೈದ್ಯಕೀಯ ಶಿಕ್ಷಣ, ಕರ್ನಾಟಕ ಸರ್ಕಾರ
ಹಾಗೂ ಉಪಾಧ್ಯಕ್ಷರು, ಆಡಳಿತ ಮಂಡಳಿ,
ಹಿಮ್ಸ್, ಹಾಸನ.

(ಎನ್. ಶಿವಶೈಲಂ)
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

(ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್)
ವೈದ್ಯಕೀಯ ಶಿಕ್ಷಣ ಸಚಿವರು,
ಕರ್ನಾಟಕ ಸರ್ಕಾರ ಹಾಗೂ
ಅಧ್ಯಕ್ಷರು, ಆಡಳಿತ ಮಂಡಳಿ,
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

ಡಾ|| ಶರಣಪ್ರಕಾಶ ಆರ್ ಪಾಟೀಲ
ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು
ಕರ್ನಾಟಕ ಸರ್ಕಾರ